**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆಃ 410/2024**

| | | | |
|---|---|---|---|
| ಹೆಸರು | | ಶ್ರೀ ಕೃಷ್ಣಮೂರ್ತಿ | ಚಾಸಾಃ 02 |
| ತಂದೆ ಹೆಸರು | | ಶ್ರೀ ತಮ್ಮಣ್ಣೇಗೌಡ | ಫ್ರಾಸಾಃ 03 |
| ವಯಸ್ಸು | | 52 ವರ್ಷ | ಸಾಕ್ಷಿಯನ್ನು ದಿನಾಂಕಃ 06.10.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ವ್ಯವಸಾಯ | |
| ವಾಸ | | ಕೊತ್ತನಹಳ್ಳಿ ಗ್ರಾಮ | |

**<u>ಮುಖ್ಯ ವಿಚಾರಣೆಃ ಮಾನ್ಯ ಇನ್ ಚಾರ್ಜ್ ಎಪಿಪಿರವರಿಂದಃ-</u>**

ನನಗೆ ಚಾಸ-1, 3 ರಿಂದ 5 ರವರು ಗೊತ್ತು. ಆರೋಪಿ ನನಗೆ ಪರಿಚಯ. ಚಾಸ-1 ರವರ ಜಮೀನಿನಲ್ಲಿ ನಾನು ಒಂದೇರಡು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಚಾಸ-1 ರವರಿಗೆ ಸರ್ವೇ ನಂಃ 482 ರಲ್ಲಿ 10 ಎಕರೆ ಜಮೀನು ಇದೆ. ಚಾಸ-1 ರವರು ತಮ್ಮ ಜಮೀನಿಗೆ ಸುಮಾರು 50 ಸಿಮೆಂಟ್ ಕಂಬಗಳನ್ನು ನೆಟ್ಟಿದ್ದರು. ಆರೋಪಿ ಮತ್ತು ಚಾಸ-1 ರವರು ಅಕ್ಕಪಕ್ಕದ ಜಮೀನಿನವರು ಎಂದರೆ ಸರಿ. ಸುಮಾರು 1 ವರ್ಷಗಳ ಹಿಂದೆ ಗಾರೆ ಕಂಬಗಳನ್ನು ಜೆಸಿಪಿಯಿಂದ ಆರೋಪಿ ಕೀಳಿಸುತ್ತಿದ್ದರು. ಆಗ ನಾನು, ಚಾಸ-4 ಮತ್ತು 5 ರವರು ಇದ್ದೇವು. ನಾವು ಕೇಳಲಾಗಿ ಸದರಿ ಜಮೀನು ತನಗೆ ಸೇರಬೇಕು ಎಂದು ಆರೋಪಿ ಹೇಳಿದರು. ಒಂದು ಕಬ್ಬಿಣದ ಗೇಟು, ಸುಮಾರು 30 ಕಂಬಗಳನ್ನು ಆರೋಪಿ ಕಿತ್ತು ಹಾಕಿದರು. ಚಾಸ-1 ರವರಿಗೆ ಸದರಿ ವಿಷಯವನ್ನು ಅಂದೆ ಕರೆ ಮಾಡಿ ತಿಳಿಸಿದೆ. ಸುಮಾರು 2 ರಿಂದ 2½ ಲಕ್ಷ ಚಾಸ-1 ರವರಿಗೆ ನಷ್ಟವಾಗಿದೆ. ಚಾಸ-1 ದಿಃ 15.06.2024 ರಂದು ಠಾಣೆಗೆ ದೂರು ನೀಡಿದರು. ದೂರು ನೀಡಿದ ಒಂದು ತಿಂಗಳ ನಂತರ ಪೊಲೀಸರು ಮಹಜರ್ ಮಾಡಿದರು. ಆಗ ನಾನು, ಚಾಸ-1 ಮತ್ತು 4 ರವರು ಹಾಜರಿದ್ದರು.

ಸಾಕ್ಷಿಯು ನಿಪಿ2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ನಿಪಿ2 ಮತ್ತು 3 ರಂತೆ ಫೋಟೋಗಳನ್ನು ತೆಗೆದರು. ಆರೋಪಿಯ ಕೃತ್ಯದಿಂದ ಚಾಸ–1 ರವರಿಗೆ ನಷ್ಟಉಂಟಾಗಿದೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಚಾಸ–1 ರವರ ಜಮೀನಿನಲ್ಲಿ ನಾನು ಭೋಗ್ಯ ಮಾಡುವ ಸಂಬಂಧ ಕರಾರು ಪತ್ರ ಆಗಿದೆ. ಸದರಿ ಕರಾರು ಪತ್ರವನ್ನು ತನಿಖಾಧಿಕಾರಿ ನನ್ನಿಂದ ಪಡೆದಿಲ್ಲ. ಚಾಸ–1 ರವರ ಸರ್ವೇ ನಂಃ 282 ಜಮೀನು ದುರಸ್ತು ಆಗಿಲ್ಲ. ಸದರಿ ಸರ್ವೇ ನಂಬರ್ ನಲ್ಲಿ ಸಾಕಷ್ಟು ಜನ ಸಾಗುವಳಿ ಮಾಡುತ್ತಾರೆ ಎಂದರೆ ಸರಿ. ಈ ಮೊದಲು ಪೋಡಿಯಾಗದಿದ್ದರು ಪ್ರತ್ಯೇಕ ಹಿಸ್ಸಾ ನಂಬರ್ ಗಳನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈಗ ಸದರಿ ಸರ್ವೇ ನಂಬರ್ ನ್ನು ಕ್ರೋಢೀಕರಿಸಿ ಸರ್ವೇ ನಂಃ 282 ಎಂದು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಚಾಸ–1 ರವರ ಸರ್ವೇ ನಂಬರ್ ದುರಸ್ತು ಆಗದ ಕಾರಣ ಅವರ ಜಮೀನು ನಿಖರವಾಗಿ ಎಲ್ಲಿ ಬರುತ್ತದೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ದಿಃ 15.06.2024 ರಂದು ಬೆಳಿಗ್ಗೆ 10.30 ಕ್ಕೆ ನಾನು ಅಲ್ಲೆ ಇದ್ದೆ. ಅಂದು ಬೆಳಿಗ್ಗೆ 8.00 ಗಂಟೆಯಿಂದ ನಾನು ಚಾಸ–1 ರವರ ಜಮೀನಿನಲ್ಲಿ ಇದ್ದೆ. ನಂತರ ಚಾಸ–1 ರವರ ಜಮೀನಿಗೆ ಚಾಸ–4 ಮತ್ತು 5 ರವರು ಬೆಳಿಗ್ಗೆ 10.15 ನಿಮಿಷಕ್ಕೆ ಬಂದರು.

ಜೆಸಿಪಿಯ ಬಣ್ಣ ಮತ್ತು ಅದರ ಚಾಲಕನ ಚಹರೆ ಬಗ್ಗೆ ಹೇಳಲು ಆಗುವುದಿಲ್ಲ. ಚಾಸ–1 ರವರಿಗೆ ಅಂದು ಬೆಳಿಗ್ಗೆ 11.30 ರ ಸಮಯಕ್ಕೆ ವಿಷಯ ತಿಳಿಸಿದೆ. ಅಂದು ಆರೋಪಿ ಜೊತೆ ಮೂರರಿಂದ ನಾಲ್ಕು ಜನ ಇದ್ದರು. ಆರೋಪಿ ಜೊತೆ ಆತನ ಪತ್ನಿ ಮತ್ತು ಮಕ್ಕಳು ಇದ್ದರು ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ನನ್ನಿಂದ ಜೆಸಿಪಿ ಸುಮಾರು

350 ಅಡಿ ದೂರದಲ್ಲಿ ಇತ್ತು. ನಾನು ಗುತ್ತಿಗೆ ಮಾಡುತ್ತಿದ್ದೇನೆ ಎಂದು ಪೊಲೀಸರಿಗೆ ದೂರು ನೀಡಲು ತೊಂದರೆ ಇರಲಿಲ್ಲ. ಚಾಸ–1 ರವರ ಜಮೀನಿನ ಪೂರ್ವ ದಿಕ್ಕಿಗೆ 12 ಕಂಬಗಳು, ಪಶ್ಚಿಮ ದಿಕ್ಕಿಗೆ 22 ಕಂಬಗಳು ಮತ್ತೆ ಕೆಲವು ಕಂಬಗಳು ಗಾಳಿ ರಭಸಕ್ಕೆ ಬಿದ್ದು ಹೋಗಿದ್ದವು. ನಾನು ಆರೋಪಿಯನ್ನು ಏಕೆ ಕಂಬಗಳನ್ನು ಕೆಡವುತ್ತಿದ್ದೀರಿ ಎಂದು ಕೇಳಿ ಹೊರಟು ಹೋದೆ. ಅಂದಾಜಿನ ಮೇಲೆ ಚಾಸ–1 ರವರಿಗೆ 1,50,000/– ನಷ್ಟವಾಗಿದೆ ಎಂದು ಹೇಳುತ್ತಿದ್ದೇನೆ. ಆರೋಪಿ ಜೆಸಿಪಿ ಸಹಾಯದಿಂದ ಚಾಸ–1 ರವರಿಗೆ ಸೇರಿದ ಕಂಬಗಳನ್ನು ಕೀಳಿಸಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಸದರಿ ಕೃತ್ಯ ಮಾಡಿದ್ದರೆ ಸದರಿ ಜೆಸಿಪಿಯ ಸಂಖ್ಯೆ ಮತ್ತು ಚಾಲಕನ ಬಗ್ಗೆ ಪೊಲೀಸರಿಗೆ ಮಾಹಿತಿ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಕಂಬಗಳು ಗಾಳಿ ಮತ್ತು ಮಳೆಗೆ ಕೆಡವಲ್ಪಟ್ಟಿದ್ದವು ಅದನ್ನು ದುರುಪಯೋಗಪಡಿಸಿಕೊಂಡು ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 20 ಕಂಬಗಳು ಮಾತ್ರ ಮಳೆಗೆ ಬಿದಿದ್ದು ಎಂದು ನುಡಿಯುತ್ತಾರೆ.

ಆರೋಪಿಯ ತಂದೆ ನಿವೃತ್ತ ಸೈನಿಕರಾದ ಕಾರಣ ಅವರಿಗೂ ಸದರಿ ಸರ್ವೇ ನಂಬರ್ ನಲ್ಲಿ 10 ಎಕರೆ ಜಮೀನು ಮಂಜೂರು ಆಗಿದೆ ಎಂದರೆ ಸರಿ. ಆರೋಪಿಯ ಸ್ವತ್ತು ಇನ್ನೂ ದುರಸ್ತು ಆಗಿಲ್ಲ ಎಂದರೆ ಸರಿ. ಸದರಿ ಜಮೀನು ಪಿರ್ಯಾದುದಾರರ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ನಿಪಿ2 ನ್ನು ಬರೆದು ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಕರೆ ಮಾಡಿ ಕರೆದರು. ನನಗೆ ನೋಟೀಸ್ ನೀಡಿಲ್ಲ. ಮಹಜರ್ ನಲ್ಲಿ ಬರೆದಿರುವ ವಿಷಯವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿಲ್ಲ. ಪೊಲೀಸರ ಕೋರಿಕೆ ಮೇರೆಗೆ ಮಹಜರ್ ಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. 20 ಕಂಬಗಳು ಮಳೆಯ ಹಾನಿಯಿಂದ ಬಿದ್ದು ಹೋಗಿದ್ದವು ಎಂದು ಪೊಲೀಸರಿಗೆ ಹೇಳಿದ್ದೇನೆ. ನಿಪಿ3 ಮತ್ತು 4 ರ ಫೋಟೋಗಳಲ್ಲಿ ಕಾಣುವ ಕಂಬಗಳು ಮುರಿದ ಬಗ್ಗೆ ಚಹರೆ ಇಲ್ಲ ಎಂದರೆ ಸರಿಯಲ್ಲ. ನಿಪಿ3 ಮತ್ತು 4 ರಲ್ಲಿ ನಾನು ಮೇಲೆ ಹೇಳಿದಷ್ಟು ಕಂಬಗಳು ಕಾಣುವುದಿಲ್ಲ

ಎಂದರೆ ಸರಿ. ನಿಪಿ3 ಮತ್ತು 4 ರ ಫೋಟೋಗಳನ್ನು ಪೊಲೀಸರು ಮೊಬೈಲ್ ನಿಂದ ತೆಗೆದರು.

ನಿಪಿ2 ಕ್ಕೆ ಚಾಸ–1 ರವರ ಜಮೀನಿನಲ್ಲಿ ಸಹಿ ಮಾಡಿದೆ. ಅದಕ್ಕೆ ನಾನು ಸ್ಥಳದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ3 ಮತ್ತು 4 ರಂತೆ ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಗಾಳಿಯ ರಭಸಕ್ಕೆ ಮುರಿದು ಬಿದ್ದ ಕಂಬಗಳ ದೇಸೆಯಿಂದ ಆರೋಪಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದಿದ್ದರೆ ನಾನು ಅಥವಾ ಚಾಸ–1 ರವರು ದೂರು ನೀಡುತ್ತಿದ್ದೇವು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ  ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**